**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶಹಾಪೂರ**

PW.02

Crl. Misc.178/2024

| | | |
|---|---|---|
| ಹೆಸರು | ಃ | ಅಂಬಮ್ಮ |
| ಗಂಡನ ಹೆಸರು | ಃ | ನಾಗಪ್ಪ |
| ವಯಸ್ಸು | ಃ | 60 ವರ್ಷ |
| ಉದ್ಯೋಗ | ಃ | ಹೊಲ ಮನೆಕೆಲಸ |
| ವಾಸ | ಃ | ಅಣಬಿ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 17-01-2026**

**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ಮಾನ್ಯ ವಕೀಲರಿಂದಃ**

ಅರ್ಜಿದಾರರು ನನ್ನ ಮಗಳು ಹಾಗೂ ಎದುರುದಾರರು ನನ್ನ ಅಳಿಯ. 16-17 ವರ್ಷಗಳ ಹಿಂದೆ ಅರ್ಜಿದಾರರು ಹಾಗೂ ಎದುರುದಾರರ ಮದುವೆಯಾಗಿರುತ್ತದೆ. ಸುಮಾರು 12 ವರ್ಷಗಳ ಕಾಲ ಅರ್ಜಿದಾರರು ಹಾಗೂ ಎದುರುದಾರರು ಅನ್ಯೋನ್ಯವಾದ ವೈವಾಹಿಕ ಜೀವನವನ್ನು ಮಾಡಿರುತ್ತಾರೆ. ನಂತರ ಎದುರುದಾರರು ಮದ್ಯಪಾನವನ್ನು ಮಾಡಿ ಅರ್ಜಿದಾರರಿಗೆ ವಿನಾ ಕಾರಣ ಹೊಡೆ ಬಡೆ ಮಾಡುತ್ತಿದ್ದರು ಹಾಗೂ ತವರು ಮನೆಯಿಂದ ಬಂಗಾರ ಬೆಳ್ಳಿ ತರಲು ಮಾನಸಿಕ ಹಿಂಸೆ ಮಾಡುತ್ತಿದ್ದರು. ಸುಮಾರು 2 ವರ್ಷಗಳಿಂದ ಅರ್ಜಿದಾರರು ನನ್ನ ಮನೆಯಲ್ಲಿನಯೇ ನನ್ನ ಜೊತೆಗೆ ವಾಸ ಮಾಡುತ್ತಿದ್ದಾರೆ. ಅರ್ಜಿದಾರರು ಎದುರುದಾರರ ವಿರುದ್ದ ಭೀ - ಗುಡಿ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿರುತ್ತಾರೆ. ಕಳೆದ 2 ವರ್ಷಗಳಿಂದ ಎದುರುದಾರರು

ಅರ್ಜಿದಾರರಿಗೆ ನೋಡಿಕೊಳ್ಳುತ್ತಿಲ್ಲ ಹಾಗೂ ಅವರ ಉಪ ಜೀವನಕ್ಕೆ ಹಣವನ್ನು ಕೊಡುತ್ತಿಲ್ಲ.

2. ಎದುರುದಾರರು ಈಗ ಎರಡನೇ ಮದುವೆಯನ್ನು ಮಾಡಿಕೊಂಡಿರುತ್ತಾರೆ. ಎದುರುದಾರರು ಎರಡನೇ ಮದುವೆ ಮಾಡಿಕೊಂಡಿರುದರಿಂದ ಅರ್ಜಿದಾರರು ಅವರ ವಿರುದ್ದ ದೂರನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು ತಮ್ಮ ಉಪ ಜೀವನಕ್ಕೆ ಯಾವುದೇ ಕೆಲಸವನ್ನು ಮಾಡಿಕೊಂಡಿರುವುದಿಲ್ಲ. ಎದುರುದಾರರು ಸುಗೂರು ಗ್ರಾಮದಲ್ಲಿ ಹಾಗೂ ತರ್ಕಸಪೇಟ ಗ್ರಾಮದಲ್ಲಿ ಹೊಲವನ್ನು ಹೊಂದಿದ್ದು ಅವರು ಒಟ್ಟು 08 ಎಕರೆ ಜಮೀನನ್ನು ಹೊಂದಿರುತ್ತಾರೆ. ಎದುರುದಾರರು ಸದರಿ ಜಮೀನಿಂದ ವರ್ಷಕ್ಕೆ ರೂ.8,00,000/- ದಿಂದ 10,00,000/- ಗಳವರೆಗೆ ಅದಾಯವನ್ನು ಹೊಂದಿರುತ್ತಾರೆ. ಎದುರುದಾರರು ಖಾಸಗಿಯಾಗಿ ಚಾಲಕನೆಂದು ಕೆಲಸ ಮಾಡುತ್ತಿದ್ದು ಪ್ರತಿ ತಿಂಗಳು ರೂ.20,000/- ಗಳ ಆದಾಯವನ್ನು ಹೊಂದಿರುತ್ತಾರೆ. ನನ್ನ ಅರ್ಜಿಯನ್ನು ನಾನು ಕೇಳಿರುವಂತೆ ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟಿ ಸವಾಲುಃ ಎದುರುದಾರರ ಪರ ಮಾನ್ಯ ವಕೀಲರು ಸಾಕ್ಷಿಯ ಪಾಟಿ ಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದೂಡಲಾಯಿತು**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು, ಮತ್ತು.**
**ಪ್ರ.ದ.ನ್ಯಾ.ದಂ. ಶಹಾಪೂರ.**